ಗಿಟಾರ್ ತಂತಿ ಸ್ವಾತಂತ್ರ್ಯದ ತಂತುವಿನಂತೆ ಕಾಣುತ್ತದೆ. ಹೀಗೆ ಹಾಡುವ ಹಾಡನ್ನು ಅವಳು ಯೂಟ್ಯೂಬ್‌ಗೆ ಅಪ್ ಲೋಡ್ ಮಾಡುತ್ತಾಳೆ. ಅವಳು ಬಳಸುವ ಲ್ಯಾಪ್‌ಟಾಪ್ ಅಮ್ಮ ಕೊಡಿಸಿದ್ದು; ಅದೂ ಅವಳ ಕಂಠೀಹಾರವನ್ನು ಮಾರಿದ ಹಣದಲ್ಲಿ. ಅದಕ್ಕೂ ಆ ತಾಯಿ ಗಂಡನಿಂದ ಒದೆ ತಿನ್ನಬೇಕಾಗುತ್ತದೆ. ಕೋಪಾವೇಷದಲ್ಲಿ ಸೀಕ್ರೇಟ್ ಸೂಪರ್ ಸ್ಟಾರ್ ತನ್ನ ಲ್ಯಾಪ್‌ಟಾಪನ್ನು ಮಹಡಿ ಮನೆಯ ಮೇಲಿನಿಂದ ಹೊರಗೆ ಎಸೆಯುತ್ತಾಳೆ. ಅದು ಚೂರುಚೂರಾಗುವುದರಲ್ಲಿ ಅವಳ ಕನಸುಗಳೂ ಚದುರಿಹೋದವೇನೋ ಎಂದು ನೋಡುಗರಿಗೆ ಅನ್ನಿಸಿ, ಮರುಕ ಹುಟ್ಟುತ್ತದೆ.

ಆಮೇಲೆ ಚದುರಿದ ಆ ಲ್ಯಾಪ್‌ಟಾಪನ್ನು ಟೇಪ್ ಹಾಕಿ ಅಂಟಿಸಿ, ಅವಳ ತಮ್ಮ ಉಡುಗೊರೆಯಾಗಿ ಕೊಡುತ್ತಾನೆ. ಲ್ಯಾಪ್‌ಟಾಪ್ ಚಾಲೂ ಆಗುವುದಿಲ್ಲ ಎಂದು ನಮಗೂ ಗೊತ್ತು. ಆದರೆ, ಅವಳ ಕನಸುಗಳು ಚಾಲೂ ಆಗುತ್ತವೆ ಎನ್ನುವುದರ ಬಲವಾದ ಸಂಕೇತ ಅದು. ಅದ್ವೈತ್ ಸಣ್ಣ ಸಣ್ಣ ಸಂಗತಿಗಳಲ್ಲೇ ಪಾತ್ರಗಳ ಗಟ್ಟಿ ಪೋಷಣೆ ಮಾಡಿದ್ದಾರೆ. ಶಾಲೆಯ ಸಹೃದಯಿ ಗೆಳೆಯನ ತಾಯಿ ವಿವಾಹ ವಿಚ್ಛೇದನ ಪಡೆದವಳು. ಅದನ್ನು ತಿಳಿಯುವ ಸೀಕ್ರೇಟ್ ಸೂಪರ್ ಸ್ಟಾರ್ ತನ್ನ ತಾಯಿಗೂ ವಿವಾಹ ವಿಚ್ಛೇದನ ಕೊಡಿಸಲು ಮುಂದಾಗುವ ಇನ್ನೊಂದು ಆಯಾಮ ಚಿತ್ರಕ್ಕಿದೆ. ಸಂಗೀತೋಪಾಸನೆಯ ಹಾದಿಯಲ್ಲೇ ಇದನ್ನೂ ಸಾಧ್ಯವಾಗಿಸಿಕೊಳ್ಳುವ ಅವಳ ನಡೆ ಕುತೂಹಲವನ್ನು ದುಪ್ಪಟ್ಟು ಮಾಡುತ್ತದೆ.

ಸೀಕ್ರೇಟ್ ಸೂಪರ್ ಸ್ಟಾರ್ ಯೂಟ್ಯೂಬ್ ಚಾನೆಲ್‌ನಲ್ಲಿ ದಿಢೀರನೆ ಜನಪ್ರಿಯಳಾಗುವುದು ಈ ದಿನಮಾನದ ಸಂಭಾವ್ಯ ಸತ್ಯ. ಅವಳಿಗೆ ಸಿನಿಮಾದಲ್ಲಿ ಹಾಡುವ ಅವಕಾಶ ಸಿಗುವುದು ಸಿನಿಮೀಯವಾದರೂ ಜೀರ್ಣಿಸಿಕೊಳ್ಳಬಹುದು. ಕೊನೆಯಲ್ಲಿ ಭಯಂಕರ ಮೆಲೋಡ್ರಾಮಾ ಸೃಷ್ಟಿಸುವ ನಿರ್ದೇಶಕರು ಕರವಸ್ತ್ರ ಒದ್ದೆಯಾಗುವಷ್ಟು ಪ್ರೇಕ್ಷಕರು ಅಳುವಂತೆ ಮಾಡುತ್ತಾರೆ. ಕೊನೆಯಲ್ಲಿ ಶುಭಂ.

'ಫಾರ್ಮುಲಾ ಸಿನಿಮಾ'ವನ್ನೂ ಹೀಗೆ ಪುನರ್ ರಚನೆಯ ಮೂಲಕ ಸಹನೀಯವಾಗಿಸಿರುವ ಅದ್ವೈತ್ ಕುಶಲತೆಗೆ ದಂಡಿಯಾಗಿ ಉದಾಹರಣೆಗಳು ಸಿಗುತ್ತವೆ. ಸಂಭಾಷಣೆ, ಎಲ್ಲರ ಅಭಿನಯ ಬೋನಸ್ಸು. ಇನ್ಸಿಯಾ ಆಗಿ ಜೈರಾ ವಸೀಂ ಕಾಡುತ್ತಾರೆ. ಅವರ ಹಾಲುಗಲ್ಲ, ಭರವಸೆಯ ಕಣ್ಣುಗಳು, ಮುಗ್ಧತೆಯ ಗೆರೆಗಳನ್ನು ಉಳಿಸಿಕೊಂಡ ಮುಖ, ಹಾಡುವಾಗ ಅಗತ್ಯ ಭಾವಗಳನ್ನು ತುಳುಕಿಸಬಲ್ಲ ಪ್ರತಿಭೆ ಎಲ್ಲಕ್ಕೂ ಧಾರಾಳವಾಗಿ ಅಂಕಗಳನ್ನು ಕೊಡಬಹುದು. ಅಮ್ಮನಾಗಿ ಮೆಹೆರ್ ವಿಜ್ ಕೂಡ ಗಮನಾರ್ಹ. ಕಠೋರಹೃದಯಿ ಅಪ್ಪನ ಪಾತ್ರಕ್ಕೆ ರಾಜ್ ಅರ್ಜುನ್ ಪರಕಾಯ ಪ್ರವೇಶ ಮಾಡಿದ್ದಾರೆ. ಶಾಲೆಯಲ್ಲಿ ಲೈನ್ ಹೊಡೆಯುವ ಹುಡುಗನಾಗಿ ಕಬೀರ್ ಸಾಜಿದ್ ತುಂಟತನವನ್ನೂ ಮೆಚ್ಚಬೇಕು. ಸಣ್ಣ ಪಾತ್ರವನ್ನೂ ರಿಲೀಫ್ ಎಂಬಂತೆ ಮಾಡಿರುವ ಅಮೀರ್ ಖಾನ್ ಈ ಚಿತ್ರದ ನಿರ್ಮಾಪಕರೂ ಆಗಿರುವುದು ವಿಶೇಷ.

ಇದು ಸಂಗೀತಮಯ ಚಿತ್ರವೂ ಆಗಿರುವುದರಿಂದ ಸಂಗೀತ ನಿರ್ದೇಶಕ ಅಮಿತ್ ತ್ರಿವೇದಿ ಪ್ರಸ್ತಾಪ ಮುಖ್ಯ. ಅವರು ಚಿತ್ರದ ಔಚಿತ್ಯಕ್ಕೆ ತಕ್ಕಂಥ ಟ್ಯೂನ್‌ಗಳನ್ನು ಕೊಟ್ಟಿದ್ದರೂ ಅವು ಹೆಚ್ಚು ಕಾಲ ಯಾರ ನೆನಪಿನಲ್ಲೂ ಉಳಿಯದೇ ಇರುವುದು ಮಿತಿಯೆನ್ನಲೇಬೇಕು. ಬದುಕಿನಲ್ಲಿ ಖುದ್ದು ಸಂಕಷ್ಟಗಳನ್ನು ಎದುರಿಸಿದವರು ಅಮಿತ್ ತ್ರಿವೇದಿ. ಅವರ ಸಂಗೀತಾವಕಾಶದ ಪರಿಧಿ ಇನ್ನಷ್ಟು ಹಿಗ್ಗಿದ್ದಿದ್ದರೆ ಈ ಚಿತ್ರ ದೊಡ್ಡ ಸಂಗೀತಮಯ ಸಿನಿಮಾ ಆಗಿಯೂ ಮೂಡಬಹುದಿತ್ತು.

ಮಕ್ಕಳ ವಸ್ತುವಿನ ಇಂಥ ದೊಡ್ಡವರ ಸಿನಿಮಾ ಧರ್ಮಸೂಕ್ಷ್ಮ ಹಾಗೂ ಭಾರತೀಯ ಭವಬಂಧನದ ಗುಣಗಳಿಂದಾಗಿಯೇ ಜನಪ್ರಿಯವಾಗುತ್ತದೆ ಎನ್ನುವುದನ್ನು ಒಪ್ಪಲೇಬೇಕು.